ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 06–4–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕನಕ ಚಿಂತನ ಕಲಾ ಶಿಬಿರ:<br><br>ಉದ್ಘಾಟನೆ:<br><br>ಶ್ರೀ ಕೆ.ಎ. ದಯಾನಂದ,<br>ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, | 07–04–2015<br>ಮಂಗಳವಾರ<br>ಬೆಳಿಗ್ಗೆ<br>10–00 ಗಂಟೆಗೆ | ಶಿಲ್ಪವನ,<br>ರವೀಂದ್ರ ಕಲಾಕ್ಷೇತ್ರ,<br>ಬೆಂಗಳೂರು |
| 2. | ವಿಶ್ವ ಆರೋಗ್ಯ ದಿನಾಚರಣೆ, ಇಂದ್ರ ಧನುಷ್ ಅಭಿಯಾನಕ್ಕೆ ಚಾಲನೆ:<br><br>ಉದ್ಘಾಟನೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯ ಮಂತ್ರಿಗಳು,<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ,<br>ವಾರ್ತಾ ಹಾಗೂ ಹಜ್ ಸಚಿವರು. | 07–04–2015<br>ಮಂಗಳವಾರ<br>ಬೆಳಿಗ್ಗೆ<br>10–30 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ,<br>ಬೆಂಗಳೂರು |
| 3. | ಕನಕ ಕಾವ್ಯ ಸಭಾ:<br><br>ಚಾಲನೆ:<br><br>ಶ್ರೀ ಕೋ. ಚೆನ್ನಬಸಪ್ಪ, ಹಿರಿಯ | 07–04–2015<br>ಮಂಗಳವಾರ<br>ಸಂಜೆ<br>4–00 ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಬೆಂಗಳೂರು. |

| | | | |
|---|---|---|---|
| | ಸಾಹಿತಿಗಳು<br><br>ಪುರಸ್ಕಾರ:<br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಸಚಿವರು. | | |

**ನಿರ್ದೇಶಕರ ಪರವಾಗಿ**

## ಪತ್ರಿಕಾ ಪ್ರಕಟಣೆ

## ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಸಮೀಕ್ಷೆ ಭರದ ಸಿದ್ಧತೆ

– ಆಯೋಗದ ಅಧ್ಯಕ್ಷ ಕಾಂತರಾಜು

ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಎಲ್ಲಾ ವರ್ಗದವರಿಗೆ ಎಲ್ಲಾ ಕಾಲದಲ್ಲಿಯೂ ನೀಡುವ ಉದ್ದೇಶದಿಂದ ಏಪ್ರಿಲ್ 11 ರಿಂದ 30 ರವರೆಗೆ ರಾಜ್ಯಾದ್ಯಂತ ನಡೆಯುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸಮೀಕ್ಷೆ ಕಾರ್ಯಗಳ ಭರದ ಸಿದ್ಧತೆ ನಡೆದಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಹೆಚ್. ಕಾಂತರಾಜು ತಿಳಿಸಿದರು.

ಅವರು ಇಂದು ಡಿ. ದೇವರಾಜ ಅರಸು ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ ಹಿಂದುಳಿದ ವರ್ಗಗಳಿಗೆ ಸೇರಿದ ದುರ್ಬಲ ಕುಟುಂಬಗಳ ಮೇಲೆ ಕೇಂದ್ರೀಕರಿಸುವ ವಿಶಿಷ್ಠ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಈ ಸಮೀಕ್ಷೆಯಲ್ಲಿ ರಾಜ್ಯದ ಪ್ರತಿಯೊಂದು ಕುಟುಂಬಕ್ಕೆ ಸೇರಿದ ವ್ಯಕ್ತಿಗಳ ಕುರಿತು ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ, ಔದ್ಯೋಗಿಕ-ಆರ್ಥಿಕ, ರಾಜಕೀಯ ಪ್ರಾತಿನಿಧ್ಯ ಅಂಶಗಳ ಮೇಲೆ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಲಾಗುವುದು ಎಂದು ಹೇಳಿದರು.

ರಾಜ್ಯದ ಎಲ್ಲಾ ಕುಟುಂಬಗಳು ಹಾಗೂ ಜನರನ್ನು ಸಮೀಕ್ಷೆಗೆ ಒಳಪಡಿಸಲಾವುದು ಎಂದರಲ್ಲದೆ ರಾಜ್ಯದಲ್ಲಿ 6.50 ಕೋಟಿ ಅಂದಾಜು ಜನಸಂಖ್ಯೆ ಇದ್ದು, ಅಂದಾಜು ಒಟ್ಟು 1.31 ಕೋಟಿ ಕುಟುಂಬಗಳಿವೆ, 1.27 ಗಣತಿ ಬ್ಲಾಕುಗಳು, 176 ತಾಲ್ಲೂಕು, 352 ನಗರ/ಪುರಸಭೆ, 199 ವಾರ್ಡುಗಳಲ್ಲಿ ಸಮೀಕ್ಷೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸಮೀಕ್ಷೆ ನಡೆಸಲು 30 ಜಿಲ್ಲಾಧಿಕಾರಿಗಳು, ಬಿಬಿಎಂಪಿ ಆಯುಕ್ತರು, 8 ವಲಯಗಳ ಜಂಟಿ ಆಯುಕ್ತರು, 30 ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾಯನಿರ್ವಹಣಾಧಿಕಾರಿಗಳು, 10 ಮಹಾನಗರ ಪಾಲಿಕೆಗಳ ಆಯುಕ್ತರು, 30 ಜಿಲ್ಲೆಗಳ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಸಾಂಖ್ಯಿಕ ಅಧಿಕಾರಿಗಳು, 76 ಉಪವಿಭಾಗಾಧಿಕಾರಿಗಳು, 176 ತಹಸೀಲ್ದಾರರು, 551 ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳ ಆಯುಕ್ತರು, ಮುಖ್ಯಾಧಿಕಾರಿಗಳು/ ಬಿಬಿಎಂಪಿ ವಾರ್ಡ್ ಕಂದಾಯ ಅಧಿಕಾರಿಗಳು, 35 ಸಂಪನ್ಮೂಲ ವ್ಯಕ್ತಿಗಳು, 2,718 ಮಾಸ್ಟರ್ ಟ್ರೈನರ್ಸ್ ಹಾಗೂ 22,189 ಸಮೀಕ್ಷಾ ಮೇಲ್ವಿಚಾರಕರು ಸೇರಿ ಒಟ್ಟು 1.33 ಲಕ್ಷ ಗಣತಿದಾರರನ್ನು  ನೇಮಿಸಲಾಗಿದೆ ಎಂದು ತಿಳಿಸಿದರು.

2-3 ಜಿಲ್ಲೆಗಳಿಗೆ ಒಬ್ಬರಂತೆ 11 ಹಿರಿಯ ಕೆ.ಎ.ಎಸ್ ಅಧಿಕಾರಿಗಳನ್ನು ಸಮೀಕ್ಷೆಯ ಉಸ್ತುವಾರಿ ಮತ್ತು ಮೇಲ್ವಿಚಾರಣೆ ನೋಡಿಕೊಳ್ಳಲು ಸರ್ಕಾರದಿಂದ ನೇಮಿಸಲಾಗಿದೆ. ಜಿಲ್ಲೆಯ ಪ್ರತಿಯೊಂದು ತಾಲ್ಲೂಕುಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಯನ್ನು ಸಮೀಕ್ಷೆಯ ಮೇಲುಸ್ತುವಾರಿ ಮಾಡಲು ನೊಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಬಿಬಿಎಂಪಿ ವಲಯದ ಜಂಟಿ ಆಯುಕ್ತರಿಗೆ ತಿಳಿಸಲಾಗಿದೆ. ಶಾಲೆಗಳಿಗೆ ರಜೆ ಇರುವ ಕಾರಣ ಹಾಗೂ ಶಿಕ್ಷಕರಿಗೆ ದಶವಾರ್ಷಿಕ ಜನಗಣತಿ ಮಾಡಿದ ಅನುಭವ ಇರುವ ಕಾರಣ ಸೀಮಿತ 20 ದಿನಗಳ ಅವಧಿಗೆ ಮಾತ್ರ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತಿದೆ ಎಂದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸಮೀಕ್ಷೆ ಕಾರ್ಯಗಳಿಗೆ ಒಟ್ಟು 189 ಕೋಟಿ ರೂ ಅಂದಾಜು ವೆಚ್ಚವಾಗಲಿದೆ. ಹೆಚ್ಚುವರಿಯಾಗಿ ಬೇಕಾಗಿರುವ ರೂ 84 ಕೋಟಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ ಎಂದು ತಿಳಿಸಿದರು.

ಸಮೀಕ್ಷೆಯಲ್ಲಿ ಸಂಗ್ರಹಿಸುವ ಮಾಹಿತಿಗಳು ನಿಖರವಾಗಿರುವಂತೆ ಮತ್ತು ಪರಿಪೂರ್ಣವಾಗಿರುವಂತೆ ಎಲ್ಲಾ ರೀತಿಯ ಕಾಳಜಿ ವಹಿಸಲಾಗುವುದು ಹಾಗೂ ಈ ಸಮೀಕ್ಷೆಯು ರಾಷ್ಟ್ರದಲ್ಲಿಯೇ ಮಾದರಿಯಾಗಲಿದೆ ಎಂದು ಹೇಳಿದರು.

ಸಮೀಕ್ಷೆ ನಮೂನೆಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕಲಾವಿದರು, ಬುದ್ಧಿಜೀವಿಗಳು, ಸಂಘ ಸಂಸ್ಥೆಗಳು, ತಜ್ಞರು, ಪರಿಣಿತರ ಸಹಕಾರಗಳನ್ನು ಪಡೆಯಲಾಗಿದೆ. ಪ್ರಧಾನ ಸಮೀಕ್ಷಾಧಿಕಾರಿಗಳು ಹಾಗೂ ಅಪರ ಸಮೀಕ್ಷಾಧಿಕಾರಿಗಳಿಗೆ ಸಮೀಕ್ಷೆಯ ಕುರಿತು ಮಾಡಿಕೊಂಡಿರುವ ಪೂರ್ವ ಸಿದ್ದತೆಗಳ ಬಗ್ಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಿಶೀಲಿಸಲಾಗಿದೆ ಹಾಗೂ ಈಗಾಗಲೇ ಗಣತಿದಾರರಿಗೆ 2 ಸುತ್ತಿನ ತರಬೇತಿಯನ್ನು ನೀಡಲಾಗಿದೆ ಎಂದರು.

ಗಣತಿದಾರರಿಗೆ ನೀಡಬೇಕಾದ ಲೇಖನ ಸಾಮಗ್ರಿಗಳ ಜೊತೆಗೆ ನಮೂನೆ ಮತ್ತು ಕೈಪಿಡಿಗಳನ್ನು ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗಿದೆ. ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಬ್ಲಾಕಿನಲ್ಲಿ ಪೈಲೆಟ್ ಸಮೀಕ್ಷೆಯನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ಪೈಲೆಟ್ ಸಮೀಕ್ಷೆಯಲ್ಲಿ ಭರ್ತಿ ಮಾಡಿದ ನಮೂನೆಗಳನ್ನು 176 ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ 8 ಬಿಬಿಎಂಪಿ ವಲಯ ಕೇಂದ್ರಗಳಲ್ಲಿ ಗಣಕೀಕರಣಗೊಳಿಸಲು ಬಿಇಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗಿದೆ. ಸಮೀಕ್ಷೆಯ ಕುರಿತು ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಕಾರ್ಯಗಳು ಪ್ರಾರಂಭವಾಗಿದೆ. ಇದಲ್ಲದೇ ಜನರಲ್ಲಿ ಸಮೀಕ್ಷೆ ಬಗ್ಗೆ ತಿಳುವಳಿಕೆ ಮೂಡಿಸಲು ಪ್ರಚಾರಾಂದೋಲನ ಕಾರ್ಯಕ್ರಮವನ್ನು ಗ್ರಾಮೀಣ ಮಟ್ಟದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ನಡೆಸಲು ಕ್ರಮ ವಹಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಇತರೆ ಸದಸ್ಯರು ಉಪಸ್ಥಿತರಿದ್ದರು.

ಬಾಬು/ಸೌಮ್ಯ

## ಅರ್ಜಿ ಆಹ್ವಾನ

**ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಖಾಲಿ ಇರುವ ಸಮೂಹ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ.) ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿ.ಆರ್.ಪಿ.) ಹುದ್ದೆಗಳನ್ನು ಭರ್ತಿಮಾಡಲು ಸೇವೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಪ್ರೌಢಶಾಲಾ ಶಿಕ್ಷಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಏಪ್ರಿಲ್ 16 ಕೊನೆಯ ದಿನವಾಗಿದ್ದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ) ಉಪ ನಿರ್ದೇಶಕರು (ಅಭಿವೃದ್ಧಿ) ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸುವುದು ಅಥವಾ ಇಲಾಖಾ ವೆಬ್‌ಸೈಟ್ www.ssakarnataka.gov.in ಅನ್ನು ವೀಕ್ಷಿಸಬಹುದಾಗಿದೆ.

**ಬಾಬು:ಜಿಪಿಆರ್.**

# ಬೇಸಿಗೆ ವಿಶೇಷ ತರಬೇತಿ

**ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)**

ಬೆಂಗಳೂರು ಹೆಬ್ಬಾಳದಲ್ಲಿರುವ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯವು ಬೇಕರಿ ತರಬೇತಿಯನ್ನು ಈ ವರ್ಷ ಬೇಸಿಗೆಯ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ವಿವಿಧ ವಿಷಯಗಳಿಂದ ಮೂರು ದಿನಗಳ ಬೇಕರಿ ತರಬೇತಿ, ಶಾಲಾ ಮಕ್ಕಳಿಗೆ ಬೇಕರಿ, ಚಾಟ್ಸ್ ತಯಾರಿಕೆ, ಮೊಟ್ಟೆ ರಹಿತ ಬೇಕರಿ ಪದಾರ್ಥಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು, ಆರೋಗ್ಯಕರ ಜ್ಯೂಸ್ ತಯಾರಿಕೆ, ನೆಲ್ಲಿಕಾಯಿ, ಸೋಯಾ ಹಾಗೂ ಕಿರುದಾನ್ಯಗಳ ಪದಾರ್ಥಗಳು, ಬೆಂಕಿ ರಹಿತ ಪದಾರ್ಥಗಳ ತಯಾರಿಕೆ ಹಾಗೂ ಮಹಿಳೆಯರಲ್ಲಿ ಪೌಷ್ಠಿಕತೆ ನಿರ್ವಹಣೆ, ಸಕ್ಕರೆ ಕಾಯಿಲೆಗೆ ಆಹಾರ ಪದ್ಧತಿ ಮತ್ತು ಪೋಷಣೆ ಇತ್ಯಾದಿ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇದಕ್ಕೆ ಗೃಹಿಣಿಯರು, ಶಾಲಾ ಮಕ್ಕಳು, ಸ್ವಯಂ ಉದ್ಯೋಗಕಾಂಕ್ಷಿಗಳು, ಕಾಲೇಜು ವಿದ್ಯಾರ್ಥಿಗಳು ಹಾಗೂ ಇನ್ನಿತರ ಆಸಕ್ತರು ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸಂಯೋಜಕರು ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ ಇವರನ್ನು ಖುದ್ದಾಗಿ ಅಥವಾ ದೂರವಾಣಿ 080 – 23513370 ಮೂಲಕ ಸಂಪರ್ಕಿಸಬಹುದಾಗಿದೆ.

**ಬಾಬು:**ಜಿಪಿಆರ್.

# ಡಾ. ಬಾಬುಜಗಜೀವನರಾಂ ಪ್ರಶಸ್ತಿಗೆ ಎನ್. ಮುನಿಸ್ವಾಮಿ ಚಿಂತಾಮಣಿ ಆಯ್ಕೆ

**ಬೆಂಗಳೂರು, ಏಪ್ರಿಲ್ 6 (ಕರ್ನಾಟಕ ವಾರ್ತೆ)**

ದಲಿತರ ಅಭಿವೃದ್ಧಿಗಾಗಿ ಉತ್ತಮ ಸೇವೆ ಸಲ್ಲಿಸುತ್ತಿರುವ ಎನ್. ಮುನಿಸ್ವಾಮಿ, ಚಿಂತಾಮಣಿ ಇವರನ್ನು 2015ನೇ ಸಾಲಿನ ಡಾ. ಬಾಬುಜಗಜೀವನರಾಂ ಪ್ರಶಸ್ತಿಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಆಯ್ಕೆ ಸಮಿತಿಯ ಅಧ್ಯಕ್ಷ ಪ್ರೊ. ಮರಳುಸಿದ್ದಪ್ಪ ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಎನ್. ಮುನಿಸ್ವಾಮಿ ಅವರು ದಲಿತ ಚಳುವಳಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಚಳುವಳಿಗಳನ್ನು ಕಟ್ಟಿ ಬೆಳೆಸಿದವರು ಎಂದರು.

ಪ್ರಶಸ್ತಿ ಆಯ್ಕೆ ಸಮಿತಿ ಮುಂದೆ 20 ಹೆಸರುಗಳು ಪ್ರಸ್ತಾಪಕ್ಕೆ ಬಂದು ಚರ್ಚೆ ನಡೆದ ನಂತರ ಅಂತಿಮವಾಗಿ ಎನ್. ಮುನಿಸ್ವಾಮಿ ಅವರ ಹೆಸರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಈ ಬಾರಿಯ ಪ್ರಶಸ್ತಿ ಮೊತ್ತವು 5 ಲಕ್ಷ ರೂ. ಗಳಾಗಿರುತ್ತವೆ ಎಂದರು.

ಶ್ರೀ ಬಾಬು ಜಗಜೀವನರಾಂ ಪ್ರಶಸ್ತಿಯು ಪಾರದರ್ಶಕವಾಗಿ ನಡೆದಿದೆ ಎಂದ ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಏಪ್ರಿಲ್ 8 ರಂದು ಸಂಜೆ 5–00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಸಿರುಕ್ರಾಂತಿಯ ಹರಿಕಾರ ಮಾಜಿ ಉಪ ಪ್ರಧಾನ ಮಂತ್ರಿ ಡಾ. ಬಾಬುಜಗಜೀವನರಾಂ ಅವರ 108 ನೇ ಜನ್ಮ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಪ್ರಶಸ್ತಿ ವಿಜೇತ ಶ್ರೀ ಎನ್. ಮುನಿಸ್ವಾಮಿ ಅವರನ್ನು ಸನ್ಮಾನಿಸಲಿದ್ದಾರೆ ಎಂದರು.

ಆಯ್ಕೆ ಸಮಿತಿಯ ಸದಸ್ಯರಾದ ಶ್ರೀ ಮಾವಳ್ಳಿ ಶಂಕರ್ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಾದ ಶ್ರೀಮತಿ ಸಾವಿತ್ರಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಾಬು:ಜಿಪಿಆರ್.

**ವಾರ್ತಾ ವಿಶೇಷ:**

## ಏಪ್ರಿಲ್ 11 ರಿಂದ ಶುರು:

## ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ

ಭಾರತದಲ್ಲಿ ಮೊಟ್ಟ ಮೊದಲ ಜಾತಿವಾರು ಜನಗಣತಿ 1872 ರಲ್ಲಿ ನಡೆದಿತ್ತು. ನಂತರ ಬಹಳ ವೈಜ್ಞಾನಿಕವಾಗಿ 1881 ರಲ್ಲಿ ನಡೆಯಿತು. ಅಲ್ಲಿಂದ ಸತತವಾಗಿ ದಶವಾರ್ಷಿಕ ಜಾತಿವಾರು ಸಮೀಕ್ಷೆ 1931 ರ ವರೆಗೆ ಮಾತ್ರ ನಡೆಸಲಾಗಿತ್ತು. ತದನಂತರ ಹಿಂದುಳಿದ ವರ್ಗಗಳ ಜಾತಿವಾರು ಸಮೀಕ್ಷೆ ವೈಜ್ಞಾನಿಕವಾಗಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಎಲ್ಲಿಯೂ ನಡೆದಿರುವುದಿಲ್ಲ. ಸ್ವತಂತ್ರ ಭಾರತದಲ್ಲಿ ಜಾತಿಗಣತಿ ನಡೆದೇ ಇಲ್ಲ. ಈಗ ಇರುವ ಜಾತಿ ಲೆಕ್ಕಾಚಾರವೆಲ್ಲ 1931 ರಲ್ಲಿ ಮಾಡಿದ ಜಾತಿಗಣತಿಯ ಆಧಾರದ್ದಾಗಿರುತ್ತದೆ. ಭಾರತ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಜಾತಿ ಗಣತಿ ನಡೆಸಲೇ ಬೇಕಾದ ಅನಿವಾರ್ಯತೆ ಕರ್ನಾಟಕ ಸರಕಾರಕ್ಕೆ ಎದುರಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳಿಗೆ ಸಾರ್ವಜನಿಕ ಸೇವೆಯಲ್ಲಿ ಸಮಾನ ಅವಕಾಶ ಕಲ್ಪಿಸುವ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಚಿಂತನೆಯಿಂದ 1918 ರಲ್ಲಿ ಮಿಲ್ಲರ್ಸ್ ಕಮಿಟಿ ನೇಮಕ ಮಾಡಲಾಗಿತ್ತು. ಸ್ವಾತಂತ್ರ್ಯಾ ನಂತರ 1960 ರಲ್ಲಿ ಡಾ। ಆರ್. ನಾಗನ ಗೌಡ ನೇತೃತ್ವದಲ್ಲಿ ಮೈಸೂರು ಹಿಂದುಳಿದ ವರ್ಗಗಳ ಸಮಿತಿ ರಚನೆಯಾಯಿತು. ನಂತರ ಕರ್ನಾಟಕ ಸರಕಾರವು ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು ಮತ್ತು ಸಮಸ್ಯೆಗಳನ್ನು ಅಧ್ಯಯನ ಮಾಡುವ ಕುರಿತು ಶ್ರೀ ಎಲ್. ಜಿ. ಹಾವನೂರು, ಟಿ. ವೆಂಕಟಸ್ವಾಮಿ, ಜಸ್ಟೀಸ್ ಓ. ಚಿನ್ನಪ್ಪ ರೆಡ್ಡಿ, ಕುದೂರು ನಾರಾಯಣ ರೈ, ಪ್ರೋ. ರವಿವರ್ಮ ಕುಮಾರ್, ಎಸ್. ಮುನಿರಾಜು, ಎಸ್. ಸಿದ್ಧಗಂಗಯ್ಯ, ಡಾ। ಸಿ.ಎಸ್. ದ್ವಾರಕನಾಥ್, ಎನ್. ಶಂಕ್ರಪ್ಪ ಇವರುಗಳ ಅಧ್ಯಕ್ಷತೆಯಲ್ಲಿ ಆಯೋಗ ರಚನೆಯಾಗಿತ್ತು. ಈಗ ಹೆಚ್. ಕಾಂತರಾಜರವರ ಅಧ್ಯಕ್ಷತೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲು ಹಿಂದುಳಿದ ವರ್ಗಗಳ ಆಯೋಗ ಕಾರ್ಯಪ್ರವೃತ್ತವಾಗಿದೆ.

ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಮತ್ತು ಸಮಸ್ಯೆಗಳ ಸಮೀಕ್ಷೆ ಮಾಡುವುದು ಹಾಗೂ ಹಿಂದುಳಿದ ವರ್ಗದವರ ಏಳಿಗೆಗಾಗಿ ಕಾರ್ಯಕ್ರಮ ರೂಪಿಸಲು ಸರಕಾರಕ್ಕೆ ಶಿಫಾರಸು ಮಾಡುವುದು ಹಿಂದುಳಿದ ವರ್ಗಗಳ ಆಯೋಗದ ಪ್ರಮುಖ ಕರ್ತವ್ಯವಾಗಿರುತ್ತದೆ. 1931 ರ ಜನಗಣತಿಯ ನಂತರ ಯಾವುದೇ ಜನಗಣತಿ ದಾಖಲೆಗಳಿಂದ ಜಾತಿವಾರು ಜನ ಸಂಖ್ಯೆಯ ಖಚಿತ ಅಂಕಿ – ಅಂಶಗಳು ದೊರೆಯುತ್ತಿಲ್ಲ. ಇದರಿಂದಾಗಿ ಸಾಮಾಜಿಕ ನ್ಯಾಯ ತತ್ವದ ಆಧಾರದ ಮೇಲೆ ಹಿಂದುಳಿದವರಿಗೆ ಸರಕಾರದ ಸೌಲಭ್ಯಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರದ ಹಲವಾರು ಯೋಜನೆಗಳಿಗೆ ಮುಖ್ಯ ಆಧಾರ, ಜಾತಿಯೇ ಆಗಿರುತ್ತದೆ. ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಮುಸ್ಲಿಂ, ಕ್ರೈಸ್ತರು, ಈಡಿಗರು, ಕುಂಬಾರರು ಇತ್ಯಾದಿ ಹೀಗೆ ಎಲ್ಲಾ ಜಾತಿಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಯೋಜನೆಗಳನ್ನು ಸರಕಾರ ಘೋಷಿಸುತ್ತಲೇ ಇರುತ್ತವೆ. ಆದರೆ ನಮ್ಮಲ್ಲಿ ಜಾತಿವಾರು ಗಣತಿಯ ಮಾಹಿತಿ ಇಲ್ಲದಿರುವ ಕಾರಣ ತಪ್ಪು ಲೆಕ್ಕಚಾರಗಳ ಮಾಹಿತಿಯಿಂದ ಫಲಾನುಭವಿಗಳ ಆಯ್ಕೆ ನಡೆಯುತ್ತದೆ. ಕೆಲವೊಮ್ಮೆ ಅನರ್ಹರು ಸುಳ್ಳು ಜಾತಿ ದೃಡೀಕರಣ ಪತ್ರದೊಂದಿಗೆ ಮೀಸಲಾತಿಯ ದುರ್ಬಳಕೆ ಮಾಡುತ್ತಿರುವ ಪ್ರಕರಣಗಳು ನಡೆಯುತ್ತಲೆ ಇರುತ್ತದೆ. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸರಕಾರ ತನ್ನ ಆದೇಶ ಸಂಖ್ಯೆ ಹಿಂವಕ 271 ಬಿಸಿಎ 2013 (ಭಾಗ–1) ದಿನಾಂಕ: 23/01/2014 ರನ್ವಯ ರಾಜ್ಯಾದ್ಯಂತ ಎಲ್ಲಾ ಜಾತಿ ಜನಾಂಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯಲು ಮನೆ ಮನೆ ಸಮೀಕ್ಷೆಯನ್ನು ನಡೆಸಲು ಆದೇಶಿಸಲಾಗಿದೆ.

## ಸಮೀಕ್ಷೆಯ ಉದ್ದೇಶ:

ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಎಲ್ಲಾ ವರ್ಗದವರಿಗೆ ಎಲ್ಲಾ ಕಾಲದಲ್ಲಿ ನೀಡುವುದು ಸರಕಾರದ ಪ್ರಮುಖ ಆದ್ಯತೆ. ಸಮಾನತೆಯ ಪರಿಕಲ್ಪನೆಯ ತತ್ವದಡಿಯಲ್ಲಿ ಎಲ್ಲಾ ನಾಗರೀಕರಿಗೆ ಸಮಾನ ಸ್ಥಾನಮಾನ ಹಾಗೂ ಅವಕಾಶವನ್ನು ಕಲ್ಪಿಸುವುದಾಗಿರುತ್ತದೆ. ಭಾರತ ಸಂವಿಧಾನ ಪರಿಚ್ಛೇಧ 15 ಮತ್ತು 16 ರಲ್ಲಿ ಸರಿಸಮಾನ ಅವಕಾಶಗಳನ್ನು ಒದಗಿಸಲು ಅನುವು ಮಾಡಿಕೊಡಲಾಗಿದೆ. ವಿವಿಧ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಶ್ಲೇಷಣೆ ಮಾಡಿ, ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸಲು ಸರಕಾರಕ್ಕೆ ಶಿಫಾರಸು ಮಾಡುವ ಜವಾಬ್ದಾರಿ ಆಯೋಗದ್ದಾಗಿರುತ್ತದೆ. ರಾಜ್ಯದ ಎಲ್ಲಾ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ಮುಖಾಂತರ ಸಮಗ್ರ ಅಂಕಿ – ಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಸಮೀಕ್ಷೆಯಲ್ಲಿ ಅನುಸರಿಸಿದ ವಿವಿಧ ಮಾನದಂಡಗಳ ಮೂಲಕ ಮೇಲೆ ಸಂಗ್ರಹಿಸಿದ ಅಂಕಿ – ಅಂಶಗಳ ಆಧಾರದಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸುವುದು. ಇವು ಸಮೀಕ್ಷೆಯ ಪ್ರಮುಖ ಉದ್ದೇಶಗಳಾಗಿರುತ್ತವೆ. ನಾಡಿನ ಕಟ್ಟಕಡೆಯ ವ್ಯಕ್ತಿಗೂ ಸರಕಾರದ ಸೌಲಭ್ಯ ತಲುಪಿಸಲು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ನಡೆಸುವುದು ಅಗತ್ಯವಾಗಿದೆ. ವಿವಿಧ ಜಾತಿ ಜನಾಂಗಗಳ ಅಭಿವೃದ್ಧಿಯಲ್ಲಿ ವ್ಯತ್ಯಾಸಗಳನ್ನು ಕಡಿಮೆ ಮಾಡಲು ಜಾತಿವಾರು ಜನಗಣತಿ ಅನಿವಾರ್ಯವಾಗಿದೆ. ಸಾಮಾಜಿಕ ನ್ಯಾಯದ ಗುರಿ ಸಾರ್ಥನೆಗೆ ಈ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಒಂದು ಮಾರ್ಗಸೂಚಿಯಾಗಲಿದೆ.

ಈ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ರಾಜ್ಯದ್ಯಾಂತ ಗಣತಿದಾರರು ಮತ್ತು ಮೇಲ್ವಿಚಾರಕರನ್ನು ಈಗಾಗಲೇ ನೇಮಿಸಿ ಅವರೆಲ್ಲರಿಗೆ ನುರಿತ ತರಬೇತುದಾರರಿಂದ 2 ಸುತ್ತುಗಳ

ಪರಿಪೂರ್ಣವಾದ ತರಬೇತಿಯನ್ನು ನೀಡಲಾಗಿದೆ. ಸಾಮಾನ್ಯವಾಗಿ 750 ಜನಸಂಖ್ಯೆ ಅಥವಾ 120 ರಿಂದ 150 ಕುಟುಂಬಗಳಿಗೆ ಒಂದು ಗಣತಿ ಬ್ಲಾಕ್ ನಿಗದಿಪಡಿಸಿ ಒಬ್ಬ ಗಣತಿದಾರನಿಗೆ ಒಂದು ಬ್ಲಾಕಿನ ಸಮೀಕ್ಷೆ ನಡೆಸುವ ಜವಾಬ್ದಾರಿ ನೀಡಲಾಗಿರುತ್ತದೆ. 6 ಗಣತಿದಾರರಿಗೊಬ್ಬರಂತೆ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ತಾಲೂಕು ಮಟ್ಟದಲ್ಲಿ ತಾಲೂಕು ತಹಶೀಲ್ದಾರರು ಗ್ರಾಮೀಣ ಭ ಭಾಗಗಳಿಗೆ ಚಾರ್ಜ್ ಅಧಿಕಾರಿಗಳಾಗಿರುತ್ತಾರೆ. ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆಗಳಿಗೆ ಕ್ರಮವಾಗಿ ಮುಖ್ಯಾಧಿಕಾರಿ, ಆಯುಕ್ತರು, ಪೌರಾಯುಕ್ತರು ಸಮೀಕ್ಷೆ ನಡೆಸಲು ಚಾರ್ಜ್ ಅಧಿಕಾರಿಗಳಾಗಿರುತ್ತಾರೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ದಿನಾಂಕ: 11/04/2015 ರಿಂದ 30/04/2015 (ಎರಡೂ ದಿನಗಳು ಸೇರಿ) ರ ವರೆಗೆ ಜರಗಲಿದೆ. ಈ ಅವಧಿಯಲ್ಲಿ ಪ್ರತಿಯೊಬ್ಬ ಗಣತಿದಾರರು ಮತ್ತು ಮೇಲ್ವಿಚಾರಕರು ಪ್ರತಿ ಗ್ರಾಮದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಅವರವರಿಗೆ ಹಂಚಿಕೆಯಾದ ಗಣತಿ ಬ್ಲಾಕ್‌ಗಳಲ್ಲಿರುವ ಕುಟುಂಬಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಸಮೀಕ್ಷೆ ನಡೆಸಲಿದ್ದಾರೆ. 2011 ರ ಜನಗಣತಿ ದಾಖಲೆಗಳಾದ ಬ್ಲಾಕ್ ಲೇಔಟ್ ನಕ್ಷೆ ಮತ್ತು ಸಂಕ್ಷಿಪ್ತ ಮನೆ ಪಟ್ಟಿಗಳನ್ನು ಆಧಾರವಾಗಿರಿಸಿಕೊಂಡು ಪರಿಷ್ಕೃತ ಪಟ್ಟಿ ತಯಾರಿಸಿ ಗಣತಿಯ ಕೆಲಸ ಆರಂಭಿಸುತ್ತಾರೆ. 2011ರ ಜನಗಣತಿಯ ನಂತರ ಅವರವರ ಬ್ಲಾಕ್‌ಗಳಲ್ಲಿ ಬದಲಾವಣೆಯಾದ ಅಂದರೆ ಹೊಸ ಕಟ್ಟಡಗಳು ಸೇರ್ಪಡೆ ಅಥವಾ ಕಟ್ಟಡಗಳನ್ನು ನಾಶಪಡಿಸಿದ್ದರೆ, ಹೊಸ ಕುಟುಂಬಗಳು ಸೇರ್ಪಡೆ ಅಥವಾ ಕುಟುಂಬ ಬೇರೆ ಕಡೆಗೆ ವರ್ಗಾವಣೆ ಆಗಿದ್ದರೆ ಈ ವಿವರಗಳನ್ನು ಸ್ಪಷ್ಟವಾಗಿ ಗಣತಿದಾರರು ಗುರುತಿಸಿಕೊಂಡು ಯಾವುದೇ ಕುಟುಂಬಗಳು ಸಮೀಕ್ಷೆಯಿಂದ ತಪ್ಪಿ ಹೋಗದಂತೆ ಜಾಗ್ರತೆ ವಹಿಸುತ್ತಾರೆ. ಮೇಲೆ ತಿಳಿಸಿದ ಅವಧಿಯಲ್ಲಿ ಯಾರದ್ದಾದರೂ ಮನೆಗೆ ಗಣತಿಗೆ ಗಣತಿದಾರರು ಬಂದಿಲ್ಲವಾದರೆ ನಿಮ್ಮ ಗ್ರಾಮದ ಗ್ರಾಮಕರಣಿಕರು ಅಥವಾ ಪಂಚಾಯತ್ ಅಭಿವೃದ್ಧಿ ಕೂಡಲೇ ತಿಳಿಸಿರಿ.

ಗಣತಿದಾರಿಗೆ ಇಲಾಖಾವತಿಯಿಂದ, ಸಮೀಕ್ಷೆಯ ವೇಳೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಲು ವಿವಿಧ ನಮೂನೆ (FORM) ಗಳನ್ನು ಒದಗಿಸಲಾಗುತ್ತಿದೆ. ಅವುಗಳಲ್ಲಿ ನಮೂನೆ 3ರ (ಈಔಖಙ–3) ಕುಟುಂಬದ ಅನುಸೂಚಿ ಭರ್ತಿಗೊಳಿಸಲು ಸಮೀಕ್ಷೆಗೆ ಒಳಪಡುವ ಕುಟುಂಬದವರು ಸಂಪೂರ್ಣ ಮಾಹಿತಿ ಒದಗಿಸಬೇಕಾಗಿದೆ. ನಮೂನೆ 3 ರಲ್ಲಿ ಒಟ್ಟು 55 ಕಲಂಗಳಿದ್ದು, ಈ ಕಲಂ ಭರ್ತಿಗೊಳಿಸಲು ಪ್ರತಿ ಕುಟುಂಬದವರು ಗಣತಿದಾರರು ಕೇಳುವ 55 ಪ್ರಶ್ನೆಗಳಿಗೆ ಸ್ಪಷ್ಟ ಹಾಗೂ ನಿಖರ ಮಾಹಿತಿಯನ್ನು ಒದಗಿಸಿದಲ್ಲಿ ಈ ಸಮೀಕ್ಷೆಯ ಉದ್ದೇಶ ಸಾರ್ಥಕವಾದೀತು.

ನಮೂನೆ 3 ರಲ್ಲಿ 2 ಭಾಗಗಳಿದ್ದು, ಭಾಗ 1 ರಲ್ಲಿ ಕಲಂ 1 ರಿಂದ 38 ರ ವರೆಗೆ ಕುಟುಂಬದ ಪ್ರತಿಯೊಬ್ಬ ಸದಸ್ಯರ ವೈಯಕ್ತಿಕ ವಿವರಗಳ ಮಾಹಿತಿ ದಾಖಲಿಸಲಾಗುತ್ತದೆ. ಭಾಗ ಸಂಖ್ಯೆ 2 ರಲ್ಲಿ ಕಲಂ 40 ರಿಂದ 55 ರಲ್ಲಿ ಕುಟುಂಬದ ಒಟ್ಟು ಸದಸ್ಯರಿಗೆ ಸಂಬಂಧಿಸಿದ ಮಾಹಿತಿ ದಾಖಲಿಸಲಾಗುತ್ತದೆ. ಪ್ರತಿ ಕುಟುಂಬಕ್ಕೂ ಪ್ರತ್ಯೇಕ ಪ್ರತ್ಯೇಕ ನಮೂನೆ 3 ನ್ನು ಉಪಯೋಗಿಸಲಾಗುತ್ತದೆ.

ಕಲಂ 1. ಕ್ರಮ ಸಂಖ್ಯೆ

ಕಲಂ 2. ಕುಟುಂಬದ ಮುಖ್ಯಸ್ಥರ ಮತ್ತು ಸದಸ್ಯರ ಹೆಸರು (ಕುಟುಂಬದ ಮುಖ್ಯಸ್ಥನಿಂದ

ಆರಂಭಿಸಿ ಕ್ರಮವಾಗಿ ಪ್ರತಿಯೊಬ್ಬ ಕುಟುಂಬದ ಸದಸ್ಯರಿಗೆ ಕ್ರಮ ಸಂಖ್ಯೆ ನೀಡಿ ದಾಖಲಿಸಲಾಗುತ್ತದೆ)ಆ ಕುಟುಂಬದವರು ಯಾರನ್ನು ಮುಖ್ಯಸ್ಥರೆಂದು ತಿಳಿಸುತ್ತಾರೋ ಅವರನ್ನೇ ಕುಟುಂಬದ ಮುಖ್ಯಸ್ಥರೆಂದು ಪರಿಗಣಿಸಲಾಗುತ್ತದೆ.

ಕಲಂ 3. ಕುಟುಂಬದ ಇತರ ಸದಸ್ಯರಿಗೆ ಕುಟುಂಬದ ಮುಖ್ಯಸ್ಥನೊಂದಿಗಿರುವ ಸಂಬಂಧ.

ಕಲಂ 4. ಲಿಂಗ (ಗಂಡು –1, ಹೆಣ್ಣು–2, ತೃತೀಯ ಲಿಂಗ –3)

ಕಲಂ 5. ಧರ್ಮ (ಸಂಕೇತ ಸಂಖ್ಯೆ 01 ರಿಂದ 10 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 6–7–8 ಜಾತಿ, ಉಪಜಾತಿ, ಜಾತಿಗೆ ಇರುವ ಇನ್ನಿತರ ಪರ್ಯಾಯ ಹೆಸರು, (ಹಿಂದುಳಿದ ವರ್ಗ ಮತ್ತು ಇತರ ಜಾತಿಗಳಲ್ಲಿ ಒಟ್ಟು 1351 (ಅನುಬಂಧ–ಎ), ಪರಿಶಿಷ್ಠ ಜಾತಿ –101 (ಅನುಬಂಧ–ಬಿ), ಮತ್ತು ಪರಿಶಿಷ್ಠ ಪಂಗಡ–51 (ಅನುಬಂಧ–ಸಿ) ಸಂಕೇತ ಸಂಖ್ಯೆಗಳಿದ್ದು, ಅವುಗಳಲ್ಲಿಯಾವುದಾದರೊಂದು

ಕಲಂ 9. ಪೂರ್ಣಗೊಂಡ ವಯಸ್ಸು ವರ್ಷಗಳಲ್ಲಿ. (ಒಂದು ವರ್ಷದ ಒಳಗಿನ ಶಿಶುವಿಗೆ 00 ಎಂದು ನಮೂದಿಸಬೇಕು. 1 ವರ್ಷದ ಮೇಲಿನವರಿಗೆ 01, 02, 03 ಇತ್ಯಾದಿ ಎಂದು ನಮೂದಿಸುವುದು)

ಕಲಂ 10. ಮಾತೃಭಾಷೆ (ಸಂಕೇತ ಸಂಖ್ಯೆ 01 ರಿಂದ 10 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 11. ಆಧಾರ್ ಕಾರ್ಡ್ ಸಂಖ್ಯೆ (ಪಡೆದಿದ್ದಲ್ಲಿ)

ಕಲಂ 12. ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆ.

ಕಲಂ 13. ನೀವು ಅಂಗವಿಕಲರೇ. (ಸಂಕೇತ ಸಂಖ್ಯೆ 01 ರಿಂದ 09 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 14. ವೈವಾಹಿಕ ಸ್ಥಾನಮಾನ (ಸಂಕೇತ ಸಂಖ್ಯೆ 01 ರಿಂದ 012 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 15. ವಿವಾಹ ಆದ ಸಮಯದಲ್ಲಿ ವಯಸ್ಸು (ವಿಧವೆ, ವಿಧರ ಮುಂತಾದವರ ವಯಸ್ಸು ನಮೂದಿಸಿ. ವಿವಾಹ ಆಗಿಯೇ ಇರದಿದ್ದಲ್ಲಿ ಫಿ ಎಂದುನಮೂದಿಸಿ)

ಕಲಂ 16. ಶಾಲೆಗೆ ಸೇರಿದ ಸಮಯದಲ್ಲಿ ವಯಸ್ಸು (6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮತ್ತು ಶಾಲೆಗೆ ಸೇರದೆ ಇರುವ 6 ವರ್ಷ ಮೇಲ್ಪಟ್ಟವರಿಗೆ "00" ಎಂದು ನಮೂದಿಸುವುದು)

ಕಲಂ 17. ಶಾಲೆಯ ವಿಧ (ಸಂಕೇತ ಸಂಖ್ಯೆ 01 ರಿಂದ 15 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 18. ವಿದ್ಯಾಭ್ಯಾಸದ ವಿವರ (ಸಂಕೇತ ಸಂಖ್ಯೆ 01 ರಿಂದ 22 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 19. ಶಾಲೆ ಬಿಟ್ಟಾಗಿನ ತರಗತಿ.

ಕಲಂ 20. ಶಾಲೆ ಬಿಟ್ಟಾಗಿನ ವಯಸ್ಸು.

ಕಲಂ 21. ಶಾಲೆ ಬಿಡಲು ಕಾರಣ. (ಸಂಕೇತ ಸಂಖ್ಯೆ 01 ರಿಂದ 22 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 22. 17 ರಿಂದ 40 ವರ್ಷದವರು ಶಿಕ್ಷಣ ಮುಂದುವರಿಸದಿರಲು ಕಾರಣ (ಸಂಕೇತ ಸಂಖ್ಯೆ 01 ರಿಂದ 15 ಮತ್ತು 00 ರಲ್ಲಿ ಯಾವುದಾದರೊಂದು) ( ಸಾಮಾನ್ಯವಾಗಿ 10ನೇ ತರಗತಿ ಮುಗಿಸಿದವರು ಇಲ್ಲವೆ ಅದರಲ್ಲಿ ಅನುತ್ತೀರ್ಣರಾದವರು)

ಕಲಂ 23. ಅನಕ್ಷರಸ್ಥರಾಗಿದ್ದರೆ ಕಾರಣ (ಸಂಕೇತ ಸಂಖ್ಯೆ 01 ರಿಂದ 09 ಮತ್ತು 00 ರಲ್ಲಿ ಯಾವುದಾದರೊಂದು)

ಕಲಂ 24. ನೀವು ಹಾಲಿ ಕೆಲಸ ಮಾಡುತ್ತಿದ್ದೀರಾ (ಸಂಕೇತ ಸಂಖ್ಯೆ 01 ರಿಂದ 07 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 25. ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸೇವೆ/ ಉದ್ಯೋಗ (ಮಾಸಿಕ ವೇತನ/ಪಿಂಚಣಿ ಮೇಲೆ) (ಸಂಕೇತ ಸಂಖ್ಯೆ 01 ರಿಂದ 34 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 26. ಹಾಲಿ ಉದ್ಯೋಗ/ವ್ಯಾಪಾರ (ಸ್ವಯಂ ಉದ್ಯೋಗ) (ಸಂಕೇತ ಸಂಖ್ಯೆ 1 ರಿಂದ 107 ಮತ್ತು 000 ರಲ್ಲಿ ಯಾವುದಾದರು ಒಂದು)

ಕಲಂ 27. ಸಾಂಪ್ರದಾಯಿಕ ವೃತ್ತಿ/ಕುಲಕಸುಬುಗಳ ವಿವರ (ಸಂಕೇತ ಸಂಖ್ಯೆ 01 ರಿಂದ 80 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 28. ಸದರಿ ಕಸುಬು ಮುಂದುವರೆದಿದೆಯೇ (ಹೌದು : 1 ಇಲ್ಲ : 2)

ಕಲಂ 29. ಸದರಿ ಕಸುಬಿನಿಂದ ಬಂದ ಕಾಯಿಲೆಗಳು (ಸಂಕೇತ ಸಂಖ್ಯೆ 01 ರಿಂದ 18 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 30. ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು (ಸಂಕೇತ ಸಂಖ್ಯೆ 01 ರಿಂದ 10 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 31. ವಾರ್ಷಿಕ ಆದಾಯ (ಸಂಕೇತ ಸಂಖ್ಯೆ 01 ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 32. ಆದಾಯ ತೆರಿಗೆ ಪಾವತಿಸಿದಾರರೆ? (ಹೌದು : 1 ಇಲ್ಲ : 2)

ಕಲಂ 33. ನೀವು ಬ್ಯಾಂಕ್ ಎಕೌಂಟ್ ಹೊಂದಿದ್ದೀರಾ (ಹೌದು : 1 ಇಲ್ಲ : 2)

ಕಲಂ 34. ಶೈಕ್ಷಣಿಕ ಸೌಲಭ್ಯಗಳು (ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳು) (ಸಂಕೇತ ಸಂಖ್ಯೆ 01 ರಿಂದ 09 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 35. ಉದ್ಯೋಗ ಸೌಲಭ್ಯಗಳು (ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳು) (ಸಂಕೇತ ಸಂಖ್ಯೆ 01 ರಿಂದ 04 ರಲ್ಲಿ ಯಾವುದಾದರು ಒಂದು)

ಕಲಂ 36. ನೀವು ಜಾತಿ ಪ್ರಮಾಣ ಪತ್ರ ಪಡೆದಿರುತ್ತೀರಾ (ಹೌದು : 1 ಇಲ್ಲ : 2)

ಕಲಂ 37. ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ್ದೀರಾ? (ಹೌದು : 1 ಇಲ್ಲ : 2)

ಕಲಂ 38. ಜನಪ್ರತಿನಿದಿಗಳಾಗಿದ್ದಲ್ಲಿ/ ಪದಾಧಿಕಾರಿಯಾಗಿದ್ದಲ್ಲಿ (ಸಂಕೇತ ಸಂಖ್ಯೆ 01 ರಿಂದ 44, 55, 66, 77 ಮತ್ತು 88 ರಲ್ಲಿ ಯಾವುದಾದರೊಂದು)

ಕಲಂ 39. ನಿಗಮ-ಮಂಡಳಿ/ ಸಹಕಾರಿ ಸಂಘ/ ಸರ್ಕಾರೇತರ ಸಂಸ್ಥೆಗಳಲ್ಲಿ ಸದಸ್ಯ/ಪದಾಧಿಕಾರಿ ಯಾಗಿದ್ದಲ್ಲಿ ವಿವರಗಳು. (ಸಂಕೇತ ಸಂಖ್ಯೆ 01 ರಿಂದ 48, 55, 66, 77 ಮತ್ತು 88 ರಲ್ಲಿ ಯಾವುದಾದರೊಂದು)

ಕಲಂ 40. ಈ ಕುಟುಂಬದವರು ಹೊಂದಿರುವ ಒಟ್ಟು ಜಮೀನು (ಕುಟುಂಬದ ಎಲ್ಲಾ ಸದಸ್ಯರಿಗೆ ಸೇರಿದಂತೆ) ಜಮೀನಿನ ವಿಧ.

ಸ್ವಾಧಿನತೆಯ ರೀತಿ (ಸಂಕೇತ ಸಂಖ್ಯೆ 01 ರಿಂದ 04 ಮತ್ತು 00 ರಲ್ಲಿ ಯಾವುದಾದರು ಒಂದು)

ಎಕರೆ

ಗುಂಟೆ

ಸೆಂಟ್ಸ್

ನೀರಾವರಿಯ ಮೂಲ (ಸಂಕೇತ ಸಂಖ್ಯೆ 01ರಿಂದ 07 ಮತ್ತು 00ರಲ್ಲಿ ಯಾವುದಾದರು ಒಂದು)

ಪ್ರಮುಖ ಬೆಳೆಗಳು (ಸಂಕೇತ ಸಂಖ್ಯೆ 01 ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 41. ಕುಟುಂಬ ಸಾಲ (ಎ) ಉದ್ದೇಶ (**Purpose**) (ಸಂಕೇತ ಸಂಖ್ಯೆ 01 ರಿಂದ 14 ಮತ್ತು 00 ರಲ್ಲಿ ಯಾವುದಾದರು ಒಂದು)

(ಬಿ) ಮೂಲ (**Source**) (ಸಂಕೇತ ಸಂಖ್ಯೆ 01 ರಿಂದ 05 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 42. ಕೃಷಿ ಸಂಬಂಧಿತ ಚಟುವಟಿಕೆಗಳು (ಸಂಕೇತ ಸಂಖ್ಯೆ 01ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 43. ಕುಟುಂಬ ಹೊಂದಿರುವ ಜಾನುವಾರುಗಳು ಸಂಖ್ಯೆ

ಕಲಂ 44. ಕುಟುಂಬವು ಹೊಂದಿರುವ ಸ್ಥಿರಾಸ್ತಿ (ಕುಟುಂಬದ ಎಲ್ಲಾ ಸದಸ್ಯರಿಗೆ ಸೇರಿದಂತೆ) (ಸಂಕೇತ ಸಂಖ್ಯೆ 01 ರಿಂದ 05 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 45. ಕುಟುಂಬವು ಹೊಂದಿರುವ ಚರಾಸ್ತಿ (ಕುಟುಂಬದ ಎಲ್ಲಾ ಸದಸ್ಯರಿಗೆ ಸೇರಿದಂತೆ) (ಸಂಕೇತ ಸಂಖ್ಯೆ 01 ರಿಂದ 18 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 46. ಕುಟುಂಬವು ಸರ್ಕಾರದಿಂದ ಪಡೆದ ಸವಲತ್ತುಗಳು.

(ಸಂಕೇತ ಸಂಖ್ಯೆ 01 ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 47. ಪಡಿತರ ಚೀಟಿ ಸಂಖ್ಯೆ

ಕಲಂ 48. ನೀವು ನೆಲೆಸಿರುವ ಸ್ಥಳ ಎಂತಹುದು (ಸಂಕೇತ ಸಂಖ್ಯೆ 01 ರಿಂದ 06 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 49. ಹಾಲಿ ವಾಸವಿರುವ ಮನೆಯ ಮಾಲೀಕತ್ವದ ಸ್ವರೂಪ (ಸ್ವಂತ: ಬಾಡಿಗೆ, ವಸತಿ ಗೃಹ, ವಸತಿ ಯೋಜನೆ, ತಾತ್ಕಾಲಿಕ ವಸತಿ) (ಸಂಕೇತ ಸಂಖ್ಯೆ 01 ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 50. ವಾಸವಿರುವ ಮನೆಯ ವಿಧ ಹಾಗೂ ಉಪಯೋಗ (ಸಂಕೇತ ಸಂಖ್ಯೆ 01 ರಿಂದ 08 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 51. ನಿವೇಶನ ಹೊಂದಿದ್ದೀರಾ (ಸಂಕೇತ ಸಂಖ್ಯೆ 01 ರಿಂದ 05 ಮತ್ತು 00 ರಲಿ ಯಾವುದಾದರು ಒಂದು)

ಕಲಂ 52. ಕುಡಿಯುವ ನೀರಿನ ಮೂಲ(ಸಂಕೇತ ಸಂಖ್ಯೆ 01ರಿಂದ 06 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 53. ಶೌಚಾಲಯ ವ್ಯವಸ್ಥೆ (ಸಂಕೇತ ಸಂಖ್ಯೆ 01 ರಿಂದ 04 ಮತ್ತು 00 ರಲ್ಲಿ ಒಂದು)

ಕಲಂ 54. ಅಡುಗೆಗೆ ಬಳಸುವ ಪ್ರಮುಖ ಇಂಧನ (ಸಂಕೇತ ಸಂಖ್ಯೆ 01 ರಿಂದ 07 ಮತ್ತು 00 ರಲ್ಲಿ ಯಾವುದಾದರು ಒಂದು)

ಕಲಂ 55. ದೀಪದ ಮೂಲ (ಸಂಕೇತ ಸಂಖ್ಯೆ 01 ರಿಂದ 06 ಮತ್ತು 00 ರಲ್ಲಿ ಯಾವುದಾದರು ಒಂದು)

ಈ ಎಲ್ಲಾ ಅಂಕಣಗಳನ್ನು ಭರ್ತಿಗೊಳಿಸಿದ ನಂತರ ನಮೂನೆ 3ರ ಕುಟುಂಬದ ಅನುಸೂಚಿಯ ಕೊನೆಯಲ್ಲಿ ಕುಟುಂಬದ ಮುಖ್ಯಸ್ಥ/ ಮಾಹಿತಿದಾರರ ಹೆಸರು ಮತ್ತು ಸಹಿ ಹಾಗೂ ದಿನಾಂಕ ಹಾಕತಕ್ಕದ್ದು, ಅದೇ ರೀತಿಯಲ್ಲಿ ಅದರಲ್ಲಿ ಗಣತಿದಾರರು ಮತ್ತು ಮೇಲ್ವಿಚಾರಕರು ತಮ್ಮ ಹೆಸರು ಮತ್ತು ದಿನಾಂಕ ಸಹಿತ ಸಹಿ ಮಾಡತಕ್ಕದ್ದು ಮತ್ತು ಅವರೆಲ್ಲರ ಮೊಬೈಲ್ ಸಂಖ್ಯೆ ನಮೂದಿಸಬೇಕು.

ಮೇಲೆ ತಿಳಿಸಿದ ಎಲ್ಲಾ ಅಂಕಣಗಳಲ್ಲಿನ (ಕಲಂಗಳ) ಮಾಹಿತಿಗಳನ್ನು ಗಣತಿದಾರರಿಗೆ ಒದಗಿಸಿದ ಕೈಪಿಡಿಯಲ್ಲಿ ನಮೂದಿಸಿದ ಸಂಕೇತ ಸಂಖ್ಯೆ (ಕೋಡ್ ಸಂಖ್ಯೆ) ಮೂಲಕ ನಮೂದಿಸಲಾಗುತ್ತದೆ. ಕುಟುಂಬದ ಮಾಹಿತಿದಾರ ಒದಗಿಸಿದ ಮಾಹಿತಿಗೆ ಗಣತಿದಾರರು ಸರಿಯಾದ ಸಂಕೇತ ಸಂಖ್ಯೆ (ಕೋಡ್ ಸಂಖ್ಯೆ) ನಮೂದಿಸಿದ್ದಾರೆಯೆ ಎಂಬುದನ್ನು ಮಾಹಿತಿದಾರರು ಸಹಿ ಹಾಕುವ ಮೊದಲು ಪರಿಶೀಲಿಸಬಹುದು. ಕೋಡ್ ಸಂಖ್ಯೆಯ ಮಾಹಿತಿಯನ್ನು ಅವರಲ್ಲಿರುವ (ಗಣತಿದಾರರ) ಕೈಪಿಡಿಯನ್ನು ಪಡೆದು ಪರಿಶೀಲಿಸಬಹುದು. ತಪ್ಪಾಗಿ ದಾಖಲಿಸಿದ್ದರೆ, ಸರಿಪಡಿಸಬಹುದಾಗಿದೆ. ಯಾವ ರೀತಿ ತಪ್ಪಾಗಿದೆ ಎಂದು ಮಾಹಿತಿದಾರರು ಗಣತಿದಾರರಿಗೆ ತಿಳಿಸಿ ಸರಿಪಡಿಸಿದ ನಂತರ ಸಹಿ ಹಾಕುವುದು. ಯಾವುದೇ ಕುಟುಂಬದಲ್ಲಿ 10 ಕ್ಕಿಂತ ಜಾಸ್ತಿ ಸದಸ್ಯರಿದ್ದಲ್ಲಿ ನಮೂನೆ-3ರ ಭಾಗ-1ನ್ನು ಹೆಚ್ಚುವರಿ ಶೀಟ್‌ನ್ನು ಪಡೆದು ದಾಖಲಿಸಿಕೊಳ್ಳುತ್ತಾರೆ. ಸಂಶಯಗಳೇನಾದರೂ ಮೂಡಿದಲ್ಲಿ ಸಹಿ ಹಾಕುವ ಮೊದಲೇ ಗಣತಿದಾರರು ಅಥವಾ ಮೇಲ್ವಿಚಾರಕರಲ್ಲಿ ಕೇಳಿ ಪರಿಹರಿಸಿಕೊಳ್ಳಿ.

ಆದುದರಿಂದ, ನಾವೆಲ್ಲರೂ ಈ ನಾಡಿನ ಜನತೆಯ ಒಳಿತಿಗಾಗಿ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡು ನಮ್ಮ ನಿಮ್ಮೆಲ್ಲರ ಮನೆ ಬಾಗಿಲಿಗೆ ಬರುವ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ನಮ್ಮ ನಿಮ್ಮ ಕುಟುಂಬದವರ ಎಲ್ಲಾ ವಿವರಗಳನ್ನು ನಿಖರವಾಗಿ ನೀಡೋಣ. ನಾವು ನೀಡುವ ಮಾಹಿತಿಗಳು ಸತ್ಯ ಮತ್ತು ಸ್ಪಷ್ಟತೆಯಿಂದ ಕೂಡಿರಲಿ. ಇನ್ನು ನಾವು ನೀಡುವ ವಿವರ ನಿಮ್ಮ ಅಥವಾ ನಿಮ್ಮ ಮುಂದಿನ ಪೀಳಿಗೆಯ ಬದುಕು ರೂಪಿಸಲು ಅನುಕೂಲವಾಗಲಿದೆ.

ಬಾಬು/ಕೆಎಂ